Song 1

# ನಿನ್ನ ಸ್ತುತಿಸುವೆ

Solo: Male

1. ನನ್ನ ಆತ್ಮದ ಪ್ರಿಯನೆ, ಕ್ರಿಸ್ತನೆ
ನೋವು ನಲಿವು ಇದ್ದರು ಬಾಳಲಿ,
ಹಗಲು ಇರುಳು ಮನದಾಳದಿ
ನಿನ್ನ ಪ್ರೀತಿಸುವೆ
ಎಂದು ನಿನ್ನ ಸ್ತುತಿಸುವೆ !

2. ನನ್ನ ಹೃದಯದ ಮಿತ್ರನೆ, ಕ್ರಿಸ್ತನೆ
ನಿನ್ನ ಜೊತೆಯೆ ನಾ ಬಯಸುವೆ,
ಹಗಲು ಇರುಳು ನಿನ್ನ ನೆನೆಸುವೆ
ನಿನ್ನ ಹೊಗಳುವೆ
ಎಂದು ನಿನ್ನ ಸ್ತುತಿಸುವೆ !

Bridge: ಎಲ್ಲಾ ಕಾಲವು, ಎಲ್ಲಾ ವೇಳೆಯು
ನಿನಗೆ ಹಾಡುವೆನು!

## Song 2 ಹಾಡು ನೀ ರಾಗವ

Duet

Chorus:

ಹಾಡು ನೀ ರಾಗವ ಕಿನ್ನರಿ ನುಡಿಸುತಲಿ
ನನ್ನಾತ್ಮದೊಂದಿಗೆ ಕ್ರಿಸ್ತನ ಸ್ತುತಿಸುತಲಿ
ಹೀಗೆ ಭಜಿಸುತಿರಲು ನಾವು ಕ್ರಿಸ್ತ ನಾಮವನ್ನು
ಬಿದ್ದೆ ಬೀಳ್ವದು ನೋಡು ಯೇರಿಕೊ ಗೋಡೆ ಇಂದು!

Stanza 1:

ಕ್ರಿಸ್ತನ ವಾಕ್ಯವು ಬಲವಾದದು
ಬಲವಾದದು ಆತನ ನುಡಿಗಳು ಸ್ಥಿರವಾದದು!
ಸ್ಥಿರವಾದ ವಾಗ್ದನವು!

ನೀಡು ನೀ ಸ್ತೋತ್ರವ ಕಿನ್ನರಿ ನುಡಿಸುತಲಿ
ಪವಿತ್ರಾತ್ಮನೊಂದಿಗೆ ಕ್ರಿಸ್ತನ ಸ್ತುತಿಸುತಲಿ
ಹೀಗೆ ಭಜಿಸುತಿರಲು ನಾವು ಕ್ರಿಸ್ತ ನಾಮವನ್ನು
ಬಿದ್ದೆ ಬೀಳ್ವದು ನೋಡು ಯೇರಿಕೊ ಗೋಡೆ ಇಂದು!

Stanza 2.:

ಕ್ರಿಸ್ತನ ಪ್ರೀತಿಯು ಮಧುರವು
ಮಧುರವು ಆತನ ಕೃಪೆಯು ಶಾಶ್ವತವು
ಶಾಶ್ವತ ಆ ನಾಮವು

ವಂದನೆ ಹೇಳುವ ಕಿನ್ನರಿ ನುಡಿಸುತಲಿ
ಮಹಿಮೆಯು ನೀಡುವ ಕ್ರಿಸ್ತನ ಸ್ತುತಿಸುತಲಿ
ಹೀಗೆ ಭಜಿಸುತಿರಲು ನಾವು ಕ್ರಿಸ್ತ ನಾಮವನ್ನು
ಬಿದ್ದೆ ಬೀಳ್ವದು ನೋಡು ಯೇರಿಕೊ ಗೋಡೆ ಇಂದು

## Song 3 ಇಮ್ಮಾನುವೇಲನೆ ನೀನು

Solo: Male

Chorus:

ಇಮ್ಮಾನುವೇಲನೆ ನೀನು, ನನ್ನ ಜೊತೆ ಇರುವಾಗ
ಹೆದರೇನು ನಾನು, ವೈರಿ ಬರುವಾಗ !
ಯುದಾಯ ಸಿಂಹವು ನೀನು, ನಿನ್ನ ಮುಂದೆ ಎಂದು
ವೈರಿ ನಿಲ್ಲಲಾರ ನೀ ಘರ್ಜಿಸಿದಾಗ!

Stanza 1:

ನನ್ನ ಯುದ್ಧವನು ಮಾಡಿಹನು
ವಿಜಯವನು ನೀಡಿಹನು!
ಜಯದ ಗೀತೆಯ ನಾನು ಹಾಡುವೇನು
ವಿಜಯೋತ್ಸವ ಮಾಡುವೇನು!

Stanza 2:

ತನ್ನ ವೈರಿಗಳ ಚಧಿರಿಸುವನು
ರಾಜ್ಯಗಳ ನಡುಗಿಸುವನು
ಸೇನಾಧಿಶ್ವರನು ನನ್ನ ಯೆಹೋವನು
ಪರಾಕ್ರಮಿಯು ನನ್ನ ದೇವನು!

## Song 4 ಆರಾಧನೆ ಮಾಡುವೆವು

Solo: Female

Chorus: ಆರಾಧನೆ ಮಾಡುವೆವು, ಕರ್ತನ ಕೊಂಡಾಡುವೆವು
ಹೊಸ ರಾಗದಿ, ಸ್ತುತಿ ಸಲ್ಲಿಸಿ!

Stanza 1: ಇಂದಲ್ಲ ನಾಳೆ ಕಷ್ಟಗಳು, ಕೊನೆ ಆಗ್ವದು, ಸುಖ ಬರುವದು!
ಕಣ್ಣೀರು ನಮಗೆ ಬಹುಕಾಲವಿರದು,
ವಾಗ್ದಾನ ಉಂಟು, ನೆರವೇರಿಸುವನು!
ಅತನೆ ನಮ್ಮ ಕರೆದಾತನು, ಕರೆದಾತನು ನಂಬಿಗಸ್ತನು!

Stanza 2: ಯೆಹೋವನೆ ನಮ್ಮ ಆಶ್ರಯವು
ಗುರಾಣಿಯು, ನಮ್ಮ ಕೋಟೆಯು
ಇಕ್ಕಟ್ಟಿನಲ್ಲಿ ಸಹಾಯಕನು, ಹಿತಚಿಂತಕನು, ನಮ್ಮ ರಕ್ಷಕನು!
ಆತನೆ ನಮ್ಮ ಸೃಷ್ಟಿಕರ್ತನು, ಸೃಷ್ಟಿಸಿದವನು ಕೈ ಬಿಡನು!

Song 5

# ನೀ ಅಬ್ರಹಾಮನ

Duet

ನೀ ಅಬ್ರಹಾಮನ, ಇಸಾಕನ, ಯಾಕೋಬನ ದೇವರು
ನಿನ್ನಲ್ಲಿ ನಾ ಉಲ್ಲಾಸಿಸುವೆ ಏನೇ ಅದರು!

ಅಂಜೂರವು ಚಿಗುರದ್ದಿದರು
ದ್ರಾಕ್ಷಾಲತೆಗಳಲಿ ಹಣ್ಣು ಸಿಗದ್ದಿದರು
ನಿನ್ನಲ್ಲಿ ನಾ ಆನಂದಿಸುವೇನು!

Song 6

# ಸದಾ ನಿನ್ನನೆ!

Solo: Male

1: ಮುಂಜಾನೆ ವೇಳೆಯಲ್ಲು, ಮಧ್ಯಾನದ ಬೇಗೆಯಲ್ಲು
ಸಂಜೆಯ ತಂಪಿನಲ್ಲು, ರಾತ್ರಿಯ ಬೆಳದಿಂಗಳಲ್ಲಿಯು!
ನಿನ್ನನೆ ಸ್ಮರಿಸುವೆನು, ನಿನ್ನನೆ ಆರಾಧಿಸುವೆನು
ಯೇಸುವೆ ನನ್ನ ಯೇಸುವೆ
ಸದಾ ನಿನ್ನನೆ ಸ್ತುತಿಸುವೆನು!

2: ಸಂತೋಷದ ಸಮಯದಲ್ಲು, ಸಮೃದಿಯ ಕಾಲದಲ್ಲಿಯು
ಕೊರತೆ ಇರುವಾಗಲು, ಗಂಢಾಂತರ ಬರುವಾಗಲು!
ನಿನ್ನನೆ ನೋಡುವೆನು, ನಿನ್ನ ಕರುಣೆ ಬೇಡುವೆನು
ಯೇಸುವೆ ನನ್ನ ಯೇಸುವೆ
ಸದಾ ನಿನ್ನನೆ ಬಯಸುವೆನು!

3: ಶ್ವಾಸವು ಇರುವಾಗಲು, ಜೀವನವು ಸಾಗಿರಲು
ಪ್ರಯಾಣವು ತೀರಿರಲು, ರಾತ್ರಿ ಸಮೀಪವಾಗಿರಲು!
ನಿನ್ನನೆ ನಿರೀಕ್ಷಿಸುವೆನು, ನಿನ್ನ ಶಾಂತಿ ನಿವಾಸವನು
ಯೇಸುವೆ ನನ್ನ ಯೇಸುವೆ
ಸದಾ ನಿನ್ನಲೆ ನೆಲೆಸುವೆನು
ಯೇಸುವೆ ನನ್ನ ಯೇಸುವೆ
ಸದಾ ನಿನ್ನನೆ ಸ್ತುತಿಸುವೆನು!

## Song 7 ಕರ್ತನೆ ನನ್ನ ಮಾರ್ಗವು

Duet

Stanza 1:

ನನ್ನ ಬಾಳನು ಅರ್ಪಿಸುತ ಯೇಸುವಿಗೆ
ಮುಂದೆ ಹೋಗುವೆ ಕೃತಜ್ಞತೆಯೊಂದಿಗೆ, ಕೃಪೆಯೊಂದಿಗೆ
ಸ್ತುತಿಸ್ತೋತ್ರದೊಂದಿಗೆ!

Chorus:

ಕರ್ತನೆ ನನ್ನ ಮಾರ್ಗವು, ಸತ್ಯವು, ಜೀವವು
ಆತನ ಸಾನಿಧ್ಯದಿ ನಿತ್ಯವು ಹರುಷವು!
ನೆನ್ನೆಯು ನೆನಪುಗಳು ನನ್ನ ಕಾಡದು
ನಾಳಿನ ಚಿಂತೆಯು ನನಗೆ ಬಾರದು!
ನನ್ನ ದೇವರು ನನ್ನ ಜೊತೆಯಲಿ ಸದ ಇರುವನು
ಎಲ್ಲಾ ವೇಳೆಯು ನನಗಾತನೆ ನಡೆಸುವನು!

Stanza 2:

ಬಾಯಾರಿದ ಜಿಂಕೆಯೊಂದು ನೀರನು ಬಯಸುವಂತೆ
ನನ್ನೇಸುವ ಬಯಸುವೆನು, ಪ್ರೀತಿಸುವೆನು
ಸದಾ ಆತನ ನಂಬುವೆನು!

## Song 8 ಸ್ತುತಿಪೆ ಯೇಸು ಕ್ರಿಸ್ತ

Solo: Female

Chorus: ಸ್ತುತಿಪೆ ಯೇಸು ಕ್ರಿಸ್ತ ನಿನ್ನ ಪರಿಶುದ್ಧ ನಾಮವನು

Stanza 1:
ನೀ ಪರಿಶುದ್ಧನು, ಮಹೋನ್ನತನು
ನೀ ಸರ್ವಶಕ್ತನು, ಸರ್ವೋತ್ತಮನು!
ಎಂದು ದೂತರ ಸೈನ್ಯದೊಂದಿಗೆ
ಹಾಡುತಲಿ ನಿನ್ನ
ಸ್ತುತಿಸುವೆ ನಾನು!

Stanza 2:
ನೀ ಒಳ್ಳೆಯವನು, ಕರುಣೆ ಉಳ್ಳವನು
ನೀ ಪ್ರೀತಿಸ್ವರೂಪರನು, ದೀರ್ಘಶಾಂತನು!
ಎಂದು ನಿನ್ನನು ವರ್ಣಿಸುತಲಿ
ಹಗಲಿರುಳು ನಿನ್ನ
ಸ್ತುತಿಸುವೆ ನಾನು

## Song 9 ಕ್ಷಣ

Solo: Male

Stanza 1:

ನೊಂದ ಮನಸುಗಳ ಸಂತೈಸುವ ದೇವರು ನೀನು
ಮುರಿದ ಹೃದಯಗಳ ಗುಣಪಡಿಸುವ ಕ್ರಿಸ್ತನು ನೀನು!
ದಾರಿ ಕಾಣದ ಜೀವಕೆ ಮಾರ್ಗವು ನೀನು
ಆಸರೆ ಇಲ್ಲದ ಬದುಕಿಗೆ ಆಶ್ರಯ ನೀನು!

Chorus:

ಒಂದು ಕ್ಷಣ ನಿನ್ನ ತೊರೆದರು
ಶಾಶ್ವತ ಕೃಪೆಯಿಂದ ಸೇರಿಸಿಕೊಳ್ಳುವೆ !
ಎಂದು ಹೇಳಿದ ನನ್ನ ದೇವರೆ
ನನ್ನನು ಸೇರಿಸಿಕೋ ಈ ಕ್ಷಣದಿಂದಲೆ !
ನಿನ್ನ ಆಶ್ರಯ ಬೇಡಿ ಬಂದಿರುವೆ
ದೀನತೆಯಿಂದಲೆ, ನೊಂದ ಹೃದಯದಿಂದಲೆ!

Stanza 2:

ಕಣ್ಣ ಹನಿಗಳನು ಒರೆಸುವ ದೇವರು ನೀನು
ಕಳೆದು ಹೋದ ಕುರಿಯ ಹುಡುಕುವ ಕ್ರಿಸ್ತನು ನೀನು!
ಬಲಹೀನವಾಗಿದ ಏಲುಬಿಗೆ ಶಕ್ತಿಯು ನೀನು
ಸೋತು ಹೋಗುತಿರುವ ಬಾಳಿಗೆ ನಿರೀಕ್ಷೆ ನೀನು!

ಈ ಕ್ಷಣ !

## Song 10 ಹೊಸನ್ನ

Solo: Male

Stanza 1: ಯೇರುಸಲೇಮ್ ನಿನ್ನ ಬಳಿಗೆ, ಯೇಸುವು ಬರುವನು
ಆತನ ಸದ ನಿರೀಕ್ಷಿಸುತಿರು ನೀನು!

Chorus: ಹೊಸನ್ನ ಹೊಸನ್ನ ಎಂದು ನಾ ಹಾಡುವೆ
ನನ್ನ ರಾಜನು, ಮದಲಿಂಗನು
ಬರುವ ಅತಿ ಶಿಘ್ರವೆ
ಹೊಸನ್ನ ಹೊಸನ್ನ !

Stanza 2: ಪರಲೋಕ ಸೇರುವೆವು, ನಿತ್ಯ ಜೀವದಿ ಬಾಳುವೆವು
ಆತನ ನಿತ್ಯ ಸ್ತುತಿಸುತಿರುವೆವು